(SRI H. K. SIDDAIYA.)

Vetehalla flowing near Channapurada Thimmanahalli, Palya Hobli, Alur Taluk, Hassan District, has been damaged and is in a dilapidated condition;

(*b*) whether it is a fact that the department concerned have prepared an estimate for restoring it and sent it for sanction to the concerned officer;

(*c*) if so, how many days back and when it will be sanctioned?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) No.

(*c*) Does not arise in view of answer to (*b*).

ಶ್ರೀ ಎಚ್. ಕೆ. ಸಿದ್ದಯ್ಯ.—ತಾವು ಕೊಟ್ಟಿರುವ ಉತ್ತರದಲ್ಲಿ ಚನ್ನಾಪುರ ತಿಮ್ಮನಹಳ್ಳಿ ಹತ್ತಿರವಿರುವ ವಾಚಹಳ್ಳದ ಅಣೆಕಟ್ಟೆಯು ಒಡೆದುಹೋಗಿದೆಯೆಂಬುದನ್ನು ಒಪ್ಪಿಕೊಂಡಿದ್ದೀರಿ. ಆದರೂ ಅಂದಾಜು ಇನ್ನೂ ಬಂದಿಲ್ಲವೆಂದು ಹೇಳುತ್ತೀರಿ. ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಒಡೆದುಹೋದ ಅಣೆಕಟ್ಟಿನ ಮೇಲುಭಾಗದಲ್ಲಿ ಸ್ವಲ್ಪದೂರದಲ್ಲೇ ಇನ್ನೊಂದು ಅಣೆಕಟ್ಟೆದೆ, ಆದ್ದರಿಂದ ಕೆಳಗೆ ಈ ಅಣೆಕಟ್ಟನ್ನು ಕಟ್ಟಿದರೂ ನೀರು ನಿಲ್ಲುವುದಿಲ್ಲ. ಈ ಕಾರಣ ಈ ಅಣೆಕಟ್ಟು ಪ್ರಯೋಜನವಿಲ್ಲವೆಂದು ತೀರ್ಮಾನವಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಅಣೆಕಟ್ಟಿರುವ ಸ್ಥಳಕ್ಕೆ ತಮ್ಮ ನವಾರಿಯೇನಾದರೂ ದಯಮಾಡಿಸಿತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬಂದ ನೆನಪಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಗಾದರೆ ಈ ಅಣೆಕಟ್ಟು ಪ್ರಯೋಜನವಿಲ್ಲವೆಂದು ಯಾವ ಆಧಾರದಮೇಲೆ ಹೇಳುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅಧಿಕಾರಿಗಳ ವರದಿಯ ಪ್ರಕಾರ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಅಣೆಕಟ್ಟು ಒಡೆದು ಹೋದ್ದರಿಂದ ನೂರಾರು ಎಕರೆ ಜಮೀನುಗಳು 10-15 ವರ್ಷಗಳಿಂದ ಪಾಳುಬಿದ್ದಿವೆಯೆಂಬುದು ತಮ್ಮ ಅವಗಾಹನೆಗೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಪಾಳುಬಿದ್ದಿದೆಯೆಂದು ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಗಾದರೆ ತಾವು ಖುದ್ದು ಪರಿಶೀಲನೆ ಮಾಡುವುದಕ್ಕೇನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಅಲ್ಲಿಗೆ ಬಂದಾಗ ತಾವು ಜ್ಞಾಪಕಮಾಡಿದರೆ ನೋಡೋಣ.

ಶ್ರೀ ಎಚ್. ಕೆ. ಸಿದ್ದಯ್ಯ.—ನೋಡಿ ಆದಷ್ಟು ಜಾಗ್ರತೆ ಅಂದಾಜು ತಯಾರುಮಾಡಿಸಿ ಅನುಕೂಲ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅನುಕೂಲವಾಗುವುದಾದರೆ ಮಾಡಿನಬಹುದು.

ಶ್ರೀ ಎಚ್. ಕೆ. ಸಿದ್ದಯ್ಯ.—ಎಗ್ಸಿಕ್ಯೂಟಿವ್ ಎಂಜಿನಿಯರ ಆಫೀಸಿಗೆ ಹೋಗಿ ಕೇಳಿದ್ದಕ್ಕೆ ಈ ಕಚ್ಚೆಯ ಬಗ್ಗೆ ಅಂದಾಜು ತಯಾರಾಗಿದೆಯೆಂದು ಹೇಳಿದರು. ಅಲ್ಲದೆ ತಯಾರುಮಾಡಿ ಸರ್ಕಾರಕ್ಕೂ ಕಳುಹಿಸಿದ್ದೇವೆಂದು ತಿಳಿಸಿದರು. ಅಂದರೆ ಅವರ ಮಾತು ಸುಳ್ಳು ಎಂದು ಭಾವಿಸೋಣವೇ?

ಶ್ರೀ ಕಡಿದಾಳ್ ಮಂಜಪ್ಪ.—1947ನೆಯ ಇಸವಿಯಲ್ಲಿ ಕಳುಹಿಸಿದ್ದರು. ಅದು ಪ್ರಯೋಜನವಿಲ್ಲವೆಂದು ತೀರ್ಮಾನವಾಗಿದೆ.

Tank Works in Gundlupet Taluk.

Q.—225. Sri SIDDIAH *alias* KUNNIAH (Gundlupet-Heggaddevankote—Scheduled Castes).—

Will the Government be pleased to state:—

the steps they have taken in regard to the following tank works in Gundlupet Taluk:—

1 Karakalawundahalli tank,
2 Yeriyur tank;
3 Bomblapur tank;
4 Vijayapurada Amanikere;
5 Devarahalli tank;
6 Kannagalada Vadaghattadakere;
7 Kelasur tank;
8 Makahalli tank;
9 Nalur Amani tank;
10 Uttur tank?

A.—Sri KADIDAL MANJAPPA (Minister for Revenue and Public Works).

1. *Karakalawundahalli Tank.*—An estimate for Rs. 7,500 is got up and sent to the Deputy Commissioner, Mysore District, for countersignature.

2. *Yeriyur Tank.*—Estimate for Rs. 10,000 got up is also sent to Deputy Commissioner, Mysore District for countersignature.

3. *Bomblapur Tank.*—A project amounting to Rs 57,900 was received and the same is returned during 3/53 to get up a new project based on the old bund alignment, as the project already got up is prohibitively costly.

4. *Vijayapurada Amanikere.*—Estimate for the work is under preparation.

5. Devarahalli Tank
6. Kannagalada Vadaghattadakere
7. Kelsur tank
8. Makahalli tank
9. Nalur Amani tank
10. Uttur tank

} Arrangements are being made to get up estimates for the restoration of the tanks.

ಶ್ರೀ ಸಿದ್ಧಯ್ಯ ಉರುಫ್ ಕುನ್ನಯ್ಯ.—ಉತ್ತರದಲ್ಲಿ ನಾಲ್ಕು ಕೆರೆಗಳ ವಿಚಾರ ಹೇಳಿದ್ದೀರಿ. ಇನ್ನು ಉಳಿದ 6 ಕೆರೆಗಳ ವಿಚಾರದಲ್ಲಿ ಯಾವ ಆರ್ಡರೂ ಆಗಿಲ್ಲವೆಂದು ಹೇಳಬಹುದೇ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲಿದೆ.

ಶ್ರೀ ಸಿದ್ಧಯ್ಯ ಉರುಫ್ ಕುನ್ನಯ್ಯ. ಈ ಬಾಕಿ ಆರು ಕೆರೆಗಳನ್ನು ಯಾವಾಗ ಮಾಡಿಸುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟು ತಯಾರಾಗಿದೆ. ಪರಿಶೀಲನೆಮಾಡಿದನಂತರ ಸಾಧಕ ಬಾಧಕಗಳನ್ನು ಪರಿಶೀಲನೆ ಮಾಡಿ ಸಾಧ್ಯವಾಗುವುದಾದರೆ ಮಾಡಿಸುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—(a) ಪ್ರಶ್ನೆಗೆ ಉತ್ತರದಲ್ಲಿ 'ಡೆಪ್ಯುಟಿ ಕಮಿಷನರಿಗೆ ಕೌಂಟರ್ ಸಿಗ್ನೇಚರಿಗಾಗಿ ಕಳುಹಿಸಲಾಗಿದೆ' ಎಂದು ಹೇಳಿದ್ದೀರಿ. ಯಾವಾಗ ಕಳುಹಿಸಲಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾಗಿ ತಾರೀಖು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಡೆಪ್ಯುಟಿ ಕಮಿಷನರ ಹತ್ತಿರ ಇಂಥ ಕೆಲಸಗಳಿಗೆ ಕೌಂಟರ್‌ಸಿಗ್ನೇಚರ್ ಮಾಡುವ ಬಗ್ಗೆ ಸಾಕಾದಷ್ಟು ಹಣವನ್ನು ಅವರ disposalನಲ್ಲಿಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವರ disposal ನಲ್ಲಿ ಹಣವನ್ನಿಡಬೇಕಾಗಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕೌಂಟರ್ ಸಿಗ್ನೇಚರಿಗಾಗಿ ಕಳುಹಿಸಿ ಬಹಳ ದಿವಸಗಳಾದರೂ ಇನ್ನೂ ಕೆಲಸ ಆಗದಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುಮಾಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ದೇವರಹಳ್ಳಿಯ ಕೆರೆಗೆ ಇನ್ನೂ ಅಂದಾಜಾಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ಅಂದಾಜು ತಯಾರುಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಪ್ರಶ್ನೆಯ ನೋಟೀಸ್ ಕೊಟ್ಟಮೇಲೆ ಎಸ್ಟಿಮೇಟ್ ಮಾಡಲಿಕ್ಕೆ ಪ್ರಾರಂಭಿಸಿದರೇ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಪೂರ್ವಭಾವಿಯಾಗಿಯೇ ಮಾಡುತ್ತಿದ್ದರು.

Extension of high level channel of Marehalli Tank, Malavalli Taluk.

Q.—230. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether there is any proposal to extend the high level channel of Marehalli Tank (South Branch) in Malavalli Taluk; if so, the estimated cost and the stage at which the records stand;

(*b*) the extent of land proposed to be brought under irrigation?

A.—Sri KADIDAL MANJAPPA (Minister for Revenue and Public Works).

(*a*) There is a proposal to extend the high level channel from Marehalli tank from the end of 8th mile to 10 miles 4 furlongs. The estimated cost of the project is Rs. 1,00,000. A detailed estimate for the project is under scrutiny.

(*b*) 431 acres.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಂದಾಜು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆಯೋ ಅಥವಾ ಡಿಪಾರ್ಟ್‌ಮೆಂಟಿನಲ್ಲಿ ಪರಿಶೀಲನೆಯಲ್ಲಿದೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಡಿಪಾರ್ಟ್‌ಮೆಂಟಿನಲ್ಲಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದಷ್ಟು ಜಾಗ್ರತೆ ತರಿಸಿಕೊಂಡು ಈ ವರ್ಷವೇ ಸ್ಯಾಂಕ್ಷನ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷವೇ ಆಗುತ್ತದೆಂದು ನಾನು ಹೇಳಲಾರೆ. ಆದಷ್ಟು ಜಾಗ್ರತೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಅಂದಾಜು ತಯಾರಾದದ್ದು ಯಾವಾಗ ಎಂದು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಂದರೆ ನಮ್ಮಾರು ಎಷ್ಟು ವರ್ಷಗಳ ಹಿಂದೆ?

ಶ್ರೀ ಕಡಿದಾಳ್ ಮಂಜಪ್ಪ.—ವರ್ಷಗಳಾಗಿಲ್ಲ; ನಮಗೆ ಬಂದಿರತಕ್ಕ ವರದಿಯ ಪ್ರಕಾರ ಎಸ್ಟಿಮೇಟ್ ತಯಾರಾಗಿ ಈಗತಾನೆ ಅದರ scrutiny ಮಾಡುತ್ತಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಳವಳ್ಳಿಯ ತಾಲ್ಲೂಕು ವಿಶ್ವೇಶ್ವರಯ್ಯ ನಾಲಾ ಕೆಳಗಿನ ಜಮೀನುಗಳಿಗಿಂತ ಈ ಮಾರೇಹಳ್ಳಿ ಕೆರೆ ಛಾಲಾ ಕೆಳಗಿನ ಜಮೀನು ಬಹಳ ಉತ್ತಮವಾದದ್ದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಾರೇಹಳ್ಳಿ ನಾಲಾ ಬಡಾವಣೆಯಾಗದೆ ಕೋಡಿಯಲ್ಲಿ ನೀರು ಹೋಲಾಗುತ್ತಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.